# ಆಹಾ ಸುದ್ದಿ!

★ ಸಸಿತೋಟ



ದಕ್ಷಿಣ ಕೊರಿಯಾದ ಮೃಗಾಲಯದಲ್ಲಿರುವ ಈ ಗಂಡಾನೆ 'ಕೋಶಿಕ್' ಸೊಂಡಿಲಿನಿಂದ ಎರಡೆರಡು ಕೆಲಸ ಮಾಡುತ್ತದೆ- ಆಹಾರವನ್ನು ಎತ್ತಿಕೊಳ್ಳಲು, ಮೃಗಾಲಯದ ಕೆಲಸಗಾರರ ಜೊತೆ ಮಾತನಾಡಲು. ಈ ಒಂಟಿ ಸಲಗ ಒಂಟಿತನ ತಾಳಲಾರದೇ ತರಬೇತುದಾರನ ಮಾತುಗಳನ್ನು ಅನುಕರಣೆ ಮಾಡಲು ಆರಂಭಿಸಿತಂತೆ. ಕೊರಿಯನ್ ಭಾಷೆಯಲ್ಲಿ 'ಹೆಲೊ' ಹೇಳುವುದು, ತಿಂಡಿ ಕೊಟ್ಟರೆ 'ಗುಡ್' ಎನ್ನುವುದು ಹೀಗೆ ಐದು ಶಬ್ದಗಳನ್ನು ಉಚ್ಚರಿಸುತ್ತದಂತೆ. ಸೊಂಡಿಲನ್ನು ಬಾಯೊಳಗೆ ತುರುಕಿಕೊಂಡು ಈ ಶಬ್ದಗಳನ್ನು ಹೊರಡಿಸುತ್ತದೆ ಎಂದಿದ್ದಾರೆ ಸಂಶೋಧಕರು. ಡಿಸೆಂಬರ್‌ನಲ್ಲಿ ಪ್ರಳಯವಾಗುತ್ತದಂತೆ. ಅದಕ್ಕೆ ಮುನ್ನ ಪ್ರಾಣಿ- ಪಕ್ಷಿಗಳು ಮನುಷ್ಯರಂತೆ ಮಾತನಾಡುತ್ತವೆ ಎಂದು ಭಾರತದ ಜ್ಯೋತಿಷಿಗಳು ಹೇಳುತ್ತಿರುವುದಕ್ಕೆ ಕೊರಿಯಾದಲ್ಲಿ ಈ ಮಾತನಾಡುವ ಆನೆ ರೂಪದಲ್ಲಿ ಸಾಕ್ಷಿ ಸಿಕ್ಕಿಬಿಟ್ಟಂತಾಗಿದೆ.

ಪೋಲೆಂಡ್‌ನ ಶವ ಪೆಟ್ಟಿಗೆ ತಯಾರಕನೊಬ್ಬ ಉತ್ಪನ್ನಗಳನ್ನು ಮಾರಲು ನಗ್ನ ರೂಪದರ್ಶಿಗಳ ಕ್ಯಾಲೆಂಡರ್ ತಯಾರಿಸಿದ್ದಾನಂತೆ. ಶವ ಪೆಟ್ಟಿಗೆಗೆ ಒರಗಿಕೊಂಡಿರುವ, ಪುರುಷನ ಹೃದಯವನ್ನು ಈಚೆ ಎಳೆಯುವ ಬಟ್ಟೆ ದ್ವೇಷಿ ರೂಪದರ್ಶಿಗಳ ಚಿತ್ರಗಳು ಅಲ್ಲಿ ಭಾರಿ ಸುದ್ದಿ ಮಾಡುತ್ತಿವೆಯಂತೆ. ಆದರೆ ಪೆಟ್ಟಿಗೆ ತಯಾರಕ ಲಿಂಡ್ನರ್ ಮಾತ್ರ 'ಶವ ಪೆಟ್ಟಿಗೆಗಳೆಂದರೆ ಆಭರಣಗಳು, ಸೌಂದರ್ಯವರ್ಧಕಗಳಿದ್ದಂತೆ. ಮಾರಾಟ ಸರಕು ಮಾತ್ರ' ಎಂದು ಕೂಲಾಗಿ ಹೇಳಿಕೆ ನೀಡಿ ಭರ್ಜರಿ ವ್ಯಾಪಾರ ಮಾಡುತ್ತಿದ್ದಾನಂತೆ. ವ್ಯಾಪಾರವೇ ಬೇರೆ, ನಂಬಿಕೆಯೇ ಬೇರೆ!

ಇಂಗ್ಲೆಂಡ್‌ನ ವಿದೇಶಾಂಗ ಕಚೇರಿ ಸತ್ತ ಹಾವಿಗಾಗಿ 16 ಸಾವಿರ ಡಾಲರ್ (ಸುಮಾರು 8.5 ಲಕ್ಷ ರೂಪಾಯಿ) ಖರ್ಚು ಮಾಡಿರುವುದು ಅಲ್ಲಿ ಭಾರಿ ಹುಯಿಲೆಬ್ಬಿಸಿದೆ. ಇಂಗ್ಲೆಂಡ್‌ನಲ್ಲಿ ಆರ್ಥಿಕ ಹಿಂಜರಿತದಿಂದಾಗಿ ಉಳಿತಾಯ ಎಂಬ ಮಂತ್ರವನ್ನು ಜಪಿಸಲಾಗುತ್ತಿದೆ. ಆದರೆ ವಿದೇಶಾಂಗ ಕಚೇರಿ ಮಾತ್ರ ಸತ್ತ ಭಾರಿ ಗಾತ್ರದ ಅನಕೊಂಡದ ಚರ್ಮದೊಳಗೆ ಸಾಮಗ್ರಿಗಳನ್ನು ತುಂಬಿಸಿ ಗೋಡೆಗೆ ಅಲಂಕಾರಿಕವಾಗಿ ನೇತು ಹಾಕಿಕೊಂಡಿದ್ದು ಸಾರ್ವಜನಿಕರ ಟೀಕೆಗೆ ಕಾರಣವಾಗಿದೆ. ನಮ್ಮಲ್ಲಿ ಅಧಿಕಾರ ವಹಿಸಿಕೊಂಡಾಗ ಕಚೇರಿಯ ವಾಸ್ತು ಬದಲಾವಣೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಸಚಿವರಿಗೆ ಈ ಸುದ್ದಿ ಖುಷಿ ಕೊಟ್ಟಿರಬಹುದು.



ಅಮೆರಿಕಾ- ಮೆಕ್ಸಿಕೊ ಗಡಿಯಲ್ಲಿ ಗಾಂಜಾ ಸಾಗಿಸಲು ಕಳ್ಳಸಾಗಣೆದಾರರು ಬಳಸಿದ ಜೀಪ್ ಇದು. ಚೂಪಾದ ಬೇಲಿಗೆ ಸಿಕ್ಕಿಕೊಂಡು ಸರ್ಕಸ್ ಮಾಡುತ್ತಿದ್ದ ಖಾಲಿ ಜೀಪ್ ಅನ್ನು ಅಮೆರಿಕಾ ಭದ್ರತಾ ಏಜೆಂಟರು ಪತ್ತೆ ಮಾಡಿದರಂತೆ. ಇಳಿಜಾರಾದ ಅಲ್ಯೂಮಿನಿಯಂ ಪಟ್ಟಿಯನ್ನು ಬಳಸಿ ಬೇಲಿ ಮೇಲಕ್ಕೇರಿ, ಹಾಗೇ ಗಡಿಯ ಈಚೆಗೆ ಇಳಿಯುವ ಕಳ್ಳಸಾಗಣೆದಾರರ ಕರಾಮತ್ತು ಕೈಕೊಟ್ಟು ತ್ರಿಶಂಕುವಿನಲ್ಲಿ ತೂಗಾಡುತ್ತಿತ್ತು ಜೀಪ್. ಈ ದಂಧೆಗೆ ಇಳಿಯುವ ಮುನ್ನ ಸರ್ಕಸ್‌ನಲ್ಲಿ ತರಬೇತಿ ಪಡೆದು ಬರುವುದು ಕಳ್ಳಸಾಗಣೆದಾರರ ಅರ್ಹತೆಯಲ್ಲಿ ಒಂದಾಗಿರಬಹುದು.




ಮನಿಲಾದಲ್ಲಿ ಶವ ಪೆಟ್ಟಿಗೆಯೊಳಗೇ 'ಕರೊಕೆ' ಸಂಗೀತ ವ್ಯವಸ್ಥೆಯನ್ನು ಮಾಡಲಾಗಿದೆ. ಸಾಧಾರಣ ಪೆಟ್ಟಿಗೆಯ ಒಳಗಿರುವ ಶವ ಹೊರಗಿನ ಶಬ್ದ ಮಾಲಿನ್ಯ ತಾಳಲಾರದೇ ಕಿವಿಮುಚ್ಚಿಕೊಂಡರೆ ಬಂಧುಗಳು ಹೇಗೆ ಸಹಿಸಿಕೊಂಡಾರು? ಈ ವಿಶೇಷ ಶವಪೆಟ್ಟಿಗೆಯೊಳಗೆ ಹೆಣ ಇಟ್ಟು ಹೂಳಿದರೆ, ಒಳಗಿರುವ ಶವ ಸಂಗೀತವನ್ನು ಕೇಳುತ್ತ ಆರಾಮವಾಗಿ ಮಲಗಬಹುದು.



ಬಿಹಾರದ ಮಧುಬನಿಯಲ್ಲಿ ಮರಗಳ್ಳರು ಎರ್ರಾಬಿರ್ರಿಯಾಗಿ ಮರ ಕತ್ತರಿಸುತ್ತಿದ್ದಾರಂತೆ. ಅವರಿಗೆ ಕಡಿವಾಣ ಹಾಕಲು ಹೆದ್ದಾರಿ ಅಕ್ಕಪಕ್ಕದ ಮರಗಳ ಕಾಂಡಗಳ ಮೇಲೆ, ಎಲೆಗಳ ಮೇಲೆ ಭಾರತೀಯ ಮಹಾಕಾವ್ಯಗಳ ಚಿತ್ರಗಳು ಅರಳುತ್ತಿವೆ. ದೇವರ ಚಿತ್ರ ಕಂಡಾದರೂ ಕಳ್ಳರು ಮರ ಕತ್ತರಿಸುವ ಕಸುಬಿಗೆ ಅಲ್ಪವಿರಾಮ ಕೊಟ್ಟಾರು ಎಂಬ ನಂಬಿಕೆ ಈ ಕಲಾವಿದರದ್ದು. ಬೆಂಗಳೂರು ಮಹಾನಗರದಲ್ಲಿ ರಸ್ತೆ ಕೆಳಸೇತುವೆ ಗೋಡೆ, ಸರ್ಕಾರಿ ಕಚೇರಿಗಳ ಕಾಂಪೌಂಡ್ ಮೇಲೆ ಭಿತ್ತಿಚಿತ್ರ ಅಂಟಿಸಬಾರದೆಂದು ಬಿಬಿಎಂಪಿ ಕಲಾವಿದರಿಂದ ಚಿತ್ರ ಬರೆಸಿದೆ. ಹಾಗೆಯೆ ಬಿಬಿಎಂಪಿ ಜಾಗ ಒತ್ತುವರಿ ಮಾಡುವವರಿಗೂ ಇಂತಹ ಚಿತ್ರ ಬರೆಸಿ ಭೂಗಳ್ಳರಿಗೆ ಮೂಗುದಾರ ಹಾಕಬಹುದಿತ್ತು.